**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ.877/2022**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

-ವಿರುದ್ಧ-

ಆರೋಪಿ/ತರು ಃ ಸುರೇಶ್ ವೈ ಎ ಬಿನ್ ಲೇಟ್ ಶಂಕರೀ ನಾಯ್ಕ, 30 ವರ್ಷ, ಚಾಲಕ, ವಾಸಃಯಲುಗೆರೆ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

-ಃಆಪಾದನೆಃ-

ದಿನಾಂಕಃ29.12.2021 ರಂದು ಸಂಜೆ 7-30 ರ ಸಮಯದಲ್ಲಿ ತರೀಕೆರೆ ಠಾಣಾ ತರಹದ್ದಿನ ಯಲುಗೆರೆ - ದುಗ್ಲಾಪುರ ಗ್ರಾಮ ಮಾರ್ಗದ ಯಲುಗೆರೆ ಕೆರೆ ಕೋಡಿ ಟಾರು ರಸ್ತೆಯಲ್ಲಿ ಅಯ್ಯಪ್ಪರವರು ಚಾಲನಾ ಪರವಾನಗಿ ಇಲ್ಲದೇ ಕೆಎ-66/ಜೆ-5870 ರ ಟಿ ವಿ ಎಸ್ ಎಕ್ಸೆಲ್ ನಲ್ಲಿ ಹೋಗುತ್ತಿದ್ದಾಗ ಆರೋಪಿಯಾದ ನೀವು ಕೆಎ-66/1271 ರ ಟ್ರ್ಯಾಕ್ಟರ್ ಗೆ ಕೆಎ-18/ಟಿ ಎ – 4220 ರ ಟ್ರ್ಯಾಲಿಯನ್ನು ಅಳವಡಿಸಿಕೊಂಡು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಅಯ್ಯಪ್ಪರವರಿಗೆ ಡಿಕ್ಕಿಪಡಿಸಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ **279** ರೀತ್ಯಾ ಶಿಕ್ಷಾರ್ಹ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ಹೇಳಿದ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲನೆ ಮಾಡಿ ಅಪಘಾತಪಡಿಸಿದ ಪರಿಣಾಮ ಅಯ್ಯಪ್ಪರವರ ಬಾಯಿ, ಕಿವಿ, ತಲೆಗೆ, ಮೂಗಿಗೆ, ಎದೆಗೆ ಪೆಟ್ಟು ಬಿದ್ದು ಮೃಪಟ್ಟಿರುತ್ತಾರೆ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**304**-ಎ ರ ರೀತ್ಯಾ ಶಿಕ್ಷಾರ್ಹ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯು ಸದರಿ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಅಪಘಾತಪಡಿಸಿ ಸ್ಥಳದಲ್ಲಿ ಟ್ರ್ಯಾಕ್ಟರ್ ಮತ್ತು ಟ್ರ್ಯಾಲಿಯನ್ನು ನಿಲ್ಲಿಸಿ, ಗಾಯಾಳುವಿಗೆ ಚಿಕಿತ್ಸೆ ಕೊಡಿಸದೆ, ಪೊಲೀಸ್ ಠಾಣೆಗೆ ಮಾಹಿತಿ ನೀಡದೆ ಸ್ಥಳದಿಂದ ಹೋಗಿದ್ದು, ಆ ಮೂಲಕ ನೀವು ಭಾರತೀಯ ಮೋಟಾರ್ ವಾಹನ ಕಾಯ್ದೆಯ ಕಲಂ.187 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಕೊನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಸದರಿ ವಾಹನಕ್ಕೆ ವಿಮೆಯನ್ನು ಪಾವತಿಸದೆ ನಿರ್ಲಕ್ಷ ಮಾಡಿದ್ದು, ಆ ಮೂಲಕ ನೀವು ಭಾರತೀಯ ಮೋಟಾರ್ ವಾಹನ ಕಾಯ್ದೆಯ ಕಲಂ.**196** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಪ್ರಶ್ನೆ-1 ಈಗ ಓದಿ ಹೇಳಿದ ನಿಮ್ಮ ಮೇಲೆ ಮಾಡಿರುವ ಆರೋಪಗಳು ತಿಳಿಯಿತೆ?
ಉತ್ತರಃ

ಪ್ರಶ್ನೆ-2ಃ ಸದರಿ ಆರೋಪಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿ ವಿವರಿಸಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ.)
ದಿನಾಂಕಃ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ತರೀಕೆರೆ.

ಆರೋಪಿ/ತರ ಸಹಿಃ